

## ಉಪ್ಪಿನಕಾಯಿಗೆ ಸೈ ಎನ್ನುವ ಖರ್ಜಿ ಹಣ್ಣು

ಈ ಹಣ್ಣು ವಿಭಿನ್ನ ರುಚಿ ಮತ್ತು ಸುವಾಸನೆಯನ್ನು ಹೊಂದಿದ್ದು, ಮಲೆನಾಡು ಮತ್ತು ಕರಾವಳಿ ಭಾಗಗಳಲ್ಲಿ ಹೇರಳವಾಗಿ ಸಿಗುತ್ತದೆ. ಮಳೆಗಾಲದಲ್ಲಿ ಕಾಡಿನಲ್ಲಿ ಎಲ್ಲೆಂದರಲ್ಲಿ ಹುಟ್ಟಿ ಬಳ್ಳಿಯಾಗಿ ಗಿಡ ಮರವನ್ನು ಆಶ್ರಯಿಸಿ ಬೆಳೆಯುವಂತಹ ಸಸ್ಯವಿದು. ಆರರಿಂದ ಏಳು ಮೀಟರ್ ಎತ್ತರ ಬೆಳೆಯುವ ಈ 'ಖರ್ಜಿ' ಗಿಡದ ತುಂಬಾ ಹರಿತವಾದ ಮುಳ್ಳುಗಳಿರುತ್ತವೆ. ಹಾಗಾಗಿ ಕಾಯಿ, ಹಣ್ಣನ್ನು ಕೀಳುವಾಗ ಜಾಗ್ರತೆಯಿಂದಿರಬೇಕು. ಖರ್ಜಿ, ಕರ್ಜಿ, ಕಾರಂಜಿ, ಕರ್ಮಂಜಿ ಎಂದೆಲ್ಲ ಕರೆಯುವ ಈ ಹಣ್ಣಿನ ಸಸ್ಯಶಾಸ್ತ್ರೀಯ ಹೆಸರು 'ಕಾರಿಸ್ಸಾ ಕರಂಡಸ್' ಎಂದು.

ಇದರ ಬಲಿತ ಕಾಯಿಗಳು ಹುಳಿಯಾಗಿರುವುದರಿಂದ ಉಪ್ಪಿನಕಾಯಿ ತಯಾರಿಸಲು ಬಳಸಲಾಗುತ್ತದೆ. ಹಣ್ಣು ಹುಳಿ ಮತ್ತು ಸಿಹಿ ಮಿಶ್ರಿತ ರುಚಿಯಲ್ಲಿರುತ್ತದೆ. ಹಣ್ಣು, ಕಾಯಿ, ಬಳ್ಳಿ, ಎಲೆ ಹೀಗೆ ಎಲ್ಲದರಲ್ಲೂ ಹಲಸಿನ ಕಾಯಿಯಲ್ಲಿರುವಂತೆ ಬಿಳಿ ಬಣ್ಣದ ಮೇಣವಿರುತ್ತದೆ. ಇದರಲ್ಲಿ ಕಬ್ಬಿನಾಂಶ ಮತ್ತು ವಿಟಮಿನ್ ಸಿ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ರಕ್ತಹೀನತೆಗೆ ಮತ್ತು ವಸಡಿನ ಸಮಸ್ಯೆಗೆ ಪರಿಹಾರ ನೀಡುತ್ತದೆ. ಇದರ ಸುಧಾರಿತ ತಳಿಗಳನ್ನು ಕಂಡುಹಿಡಿಯಲಾಗಿದ್ದು, ಅವುಗಳನ್ನು ನೆಟ್ಟು ಬೆಳೆಸಲಾಗುತ್ತಿದೆ. ಈಗಾಗಲೇ ಮಲೆನಾಡಿನ ಹಲವು ಹಣ್ಣಿನ ಪ್ರಭೇದಗಳು ವಿನಾಶದ ಅಂಚಿನಲ್ಲಿ ಇರುವುದರಿಂದ, ಇಂತಹ ಹಣ್ಣಿನ ಸಸ್ಯಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕಾಗಿದೆ.

**–ಜಯಂತಿ ರಾಘವೇಂದ್ರ, ಆಗುಂಬೆ**



## ಹಾಳೆ ಟೊಪ್ಪಿ ಹಳೆ ಸೈಕಲ್...

ಕಂಬಳಿ ಕೊಪ್ಪೆ, ಗಟರ್ ಮಷೀನ್, ಸುರುಳಿ ಸುತ್ತಿದ ಪೈಪ್, ಚೀಲದಲ್ಲೊಂದಿಷ್ಟು ಪರಿಕರಗಳನ್ನಿಟ್ಟುಕೊಂಡು, ಶೃಂಗೇರಿ ಕೆರೆಮನೆಯ ಭರತ್ ರಾಜ್ ಅವರ ಕ್ಯಾಮೆರಾಗೆ ಸಿಕ್ಕ ಈ ವ್ಯಕ್ತಿ ಮಲೆನಾಡಿನ ವಿಶಿಷ್ಟ ಅಡಿಕೆ ಸಂಸ್ಕೃತಿಯ ಸಾರುವ ಪ್ರತೀಕದಂತೆ ಕಂಡರು. ಮಲೆನಾಡಿನ ಸುಖ ಸಮೃದ್ಧಿಯ ಬದುಕಿಗೆ ಕಾರಣವಾದ ಅಡಿಕೆ ಬೆಳೆಗೆ ಔಷಧಿ ಹೊಡೆಯಲು ಸಜ್ಜಾಗಿ ತೆರಳುತ್ತಿರುವ ಚಿತ್ರದಲ್ಲಿನ ವಸ್ತುಗಳು ಆಗಲೇ ವಿರಳವಾಗಿವೆ. ಕಂಬಳಿ ಕೊಪ್ಪೆಯನ್ನು ರೈನ್ ಕೋಟ್, ಸೈಕಲ್ ಅನ್ನು ಬೈಕ್ ನುಂಗಿದ್ದಾಗಿದೆ. ಕಾಲಿಗೆ ಹಗ್ಗದ ಕುಣಿಕೆ ಹಾಕಿಕೊಂಡು, ಸುಮಾರು 60–70ಅಡಿ ಎತ್ತರದ ಬಳುಕುವ ಅಡಿಕೆ ಮರಗಳನ್ನು ಮಳೆಗಾಲದಲ್ಲಿ ಹತ್ತಿ, ಆಸನಕ್ಕೆ ಕೊಕ್ಕೆ ಮಣೆಯನ್ನು ಇಟ್ಟುಕೊಂಡು ಔಷಧಿ ಸಿಂಪಡಿಸುವ, ಕೊನೆ ಇಳಿಸುವ ಕೌಶಲ ಹೊಂದಿದವರು ಇಲ್ಲವೇ ಇಲ್ಲ ಎನ್ನುವಷ್ಟು ವಿರಳಾತಿ ವಿರಳವಾಗಿದ್ದಾರೆ.

ಇದೀಗ ಮೋಟರೀಕೃತ ಮರ ಹತ್ತುವವರು, ರೋಬೋಟಿಕ್ ಆರೋಹಿಗಳು, ಡ್ರೋನ್‌ಗಳು ಇಂತಹ ಕೆಲಸ ಮಾಡಲು ಸಜ್ಜಾಗಿವೆ. ಬಹು ಮುಖ್ಯವಾಗಿ ಮಲೆನಾಡಿನಲ್ಲಿ ಅಡಿಕೆಗೆ ಹಳದಿ ರೋಗ ಆವರಿಸಿ ವಿನಾಶದ ಹಂತ ಆರಂಭವಾಗಿದೆ. ರೋಗಗ್ರಸ್ತವಾಗಿ ಉಳಿಸಿಕೊಳ್ಳಲಾಗದ ಎಕರೆ ಗಟ್ಟಲೆ ಅಡಿಕೆ ತೋಟಗಳನ್ನು ಕಡಿದುರುಳಿಸಿದ್ದು, ಆ ಬಟಾ ಬಯಲಿನ ಮಣ್ಣಿನ ಕಣಗಳು ತಮ್ಮೊಡಲಿನ ನೋವಿನ ಕಥೆಯನ್ನು ಹೇಳುತ್ತಾ ನಿಸ್ತೇಜವಾಗಿವೆ. ಇಂಥ ಸಂದರ್ಭದಲ್ಲಿ ಸಮೃದ್ಧ ಮಲೆನಾಡಿನ ಕಾಲ ಗತಿಯಲ್ಲಿನ ಚಿತ್ರಣವನ್ನು ನೆನಪಿಗೆ ತಂದುಕೊಡುವಂತಹ ಪರಿಕರಗಳನ್ನು ಜತನದಿಂದ ಕಾಪಿಟ್ಟುಕೊಂಡ ಈ ವ್ಯಕ್ತಿ, ಸುರಿಯುತ್ತಿರುವ ಜಡಿ ಮಳೆ ಕೊಂಚ ಬಿಡುವು ಕೊಟ್ಟಾಗ, ಉಳಿದ ತೋಟಕ್ಕೆ ಔಷಧಿ ಸಿಂಪಡಿಸಲು ಹೊರಟಿರುವ ದೃಶ್ಯ ಚರಿತ್ರೆ ಭವಿಷ್ಯದ ಕೊಂಡಿಯಂತೆ ಕಂಡುಬರುತ್ತದೆ.

**–ಎಸ್.ಎನ್. ಚಂದ್ರಕಲಾ, ಕೊಪ್ಪ**

## 'ರಟಗೊಳ್ಳಿ' ನಡುವೆ ಮೊಹರಂ ಕುಣಿತ

ಮೊಹರಂ ಹಬ್ಬ ಭಾವೈಕ್ಯತೆಯ ಸಂಗಮ. ಮೊಹರಂ ಆಚರಣೆಯ ಮೊದಲ ಮೆರಗು ಮೊಹರಂ ಹೆಜ್ಜೆ ಕುಣಿತ. ಆದರೆ ಈ ಚಿತ್ರದಲ್ಲಿರುವ ಹೆಜ್ಜೆ ಕುಣಿತಕ್ಕೆ ವಿಶೇಷವಿದೆ. ಸಾಮಾನ್ಯವಾಗಿ ಸಜ್ಜಿಕೆ ಮೇಲೆ ಮೊಹರಂ ಕುಣಿತ ಹಾಕುವುದು ಸುಲಭ. ಆದರೆ ಚಿತ್ರದಲ್ಲಿ ಕಾಣುವ ರಟಗೊಳ್ಳಿ ಮುಳ್ಳು ಹೊಂದಿರುವ ಎಲೆಯನ್ನು ಹಚ್ಚಿರುವ ಚೌಕಾಕಾರದ ಕಟ್ಟಿಗೆಯ ಆಕಾರದ ಚಟ್ಟುಗಳ ನಡುವೆ ನಿಂತು ಕುಣಿತ ಮಾಡುವುದು ರೋಚಕ ಆಚರಣೆ.

ಹೆಜ್ಜೆ ಕುಣಿತ ಮಾಡುವುದಲ್ಲದೆ ಹಾಡುವ ಹಾಡಿಗೆ ಹೆಜ್ಜೆ ಕುಣಿತದವರು ಕೋರಸ್ ಹಾಡುತ್ತಾ ಹೆಜ್ಜೆಹಾಕಬೇಕು. ಅಕಸ್ಮಾತ್ ತಪ್ಪಾದರೆ ಕಾಲಿಗೆ ರಟಗೊಳ್ಳಿ ಮುಳ್ಳು ತಾಕುತ್ತದೆ. ಅಷ್ಟೊಂದು ಕರಾರುವಕ್ಕಾಗಿ ಹೆಜ್ಜೆ ಹಾಕುತ್ತಾರೆ. ಆ ಚೌಕಟ್ಟು ತಮಟೆಯನ್ನು ಆ ಹಾಡಿಗೆ ತಕ್ಕಂತೆ ಬಾರಿಸುವುದು ಮತ್ತೊಂದು ವಿಶೇಷ. ಅಬ್ಬಾ ಆ ಕ್ಷಣ ತುಂಬಾ ವಿಸ್ಮಯದ ಜೊತೆಗೆ ಕುಣಿತ ನೋಡುವುದೇ ಒಂದು ರೋಮಾಂಚನವಾಗಿರುತ್ತದೆ. ಶತಮಾನದಿಂದ ನಡೆಯುವ ಈ ಮೊಹರಂ ಹಬ್ಬದ ಹೆಜ್ಜೆ ಕುಣಿತ ಇನ್ನೂ ಉತ್ತರಕರ್ನಾಟಕದ ಹಳ್ಳಿಗಳಲ್ಲಿ ಜೀವಂತವಾಗಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕಬ್ಬಲಗೇರಿ ಗ್ರಾಮದಲ್ಲಿ ಮೊಹರಂ ಹಬ್ಬದ ಕುಣಿತದ ದೃಶ್ಯವಿದು.

**–ಮಹಾಂತೇಶ ಬಾಗೇವಾಡಿ, ಬಾದಾಮಿ**

